ಬರಲು ಕನಿಷ್ಠ ನಾಲ್ಕು ದಿನಗಳಾಗುತ್ತದೆಂದು, ಡೆಡ್ ಬಾಡಿಯನ್ನು ಯಾವುದಾದರೂ ಆಸ್ಪತ್ರೆಯಲ್ಲಿ ಕೆಡದಂತೆ ಇರಿಸಲು ಹೇಳಿದ್ದರು. ವಾಸ್ತವವಾದಿಯಾಗದ್ದ ಋಗ್ವೇದಿಯವರು, “ನೋಡ್ರಪ್ಪ ಹೆಣಾನ ಆಸ್ಪತ್ರೆಯಲ್ಲಿ ಇಟ್ಟು, ಊಟ, ನಿದ್ದೆ ಮಾಡ್ಕೊಂಡು ಇರೋದಕ್ಕೆ ನನ್ನ ಕೈಲಿ ಆಗೋದಿಲ್ಲ. ಹೆಣಾನ ಬೇಕಾದ್ರೆ ವಿಡಿಯೊ ಕಾಲ್‌ನಲ್ಲೆ ನೋಡ್ಕೊಳ್ರಿ. ತಿಥಿಗೆ ಬೇಕಾದ್ರೆ ಬನ್ನಿ.” ಎಂದು ವಾಟ್ಸ್‌ಆ್ಯಪ್ ವಿಡಿಯೊ ಕಾಲ್‌ನಲ್ಲಿ ಹೆಣ ತೋರಿಸಿದ್ದರು. ಇಬ್ಬರು ಮಕ್ಕಳೂ ಸಂಸಾರಗಳ ಸಮೇತರಾಗಿ ವಿಡಿಯೊ ಕಾಲ್‌ನಲ್ಲಿ ಕಣ್ಣೀರು ಸುರಿಸಿದ್ದರು. ನಂತರ ಹನ್ನೊಂದನೆಯ ದಿನದ ತಿಥಿಗೆ ಇಬ್ಬರೂ ಸಂಸಾರ ಸಮೇತರಾಗಿ ಬಂದು ವಾರ ಕಾಲ ಬಂದಿದ್ದರು. ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದ ದೊಡ್ಡ ಮಗನ ಮಗ, “ತಾತ ಅಜ್ಜಿ ಸತ್ತಾಗ ನಮಗೆ ಫೈನಲ್ ಎಕ್ಸಾಂ ನಡಿತಾ ಇತ್ತು. ಮೂರು ದಿನಗಳ ಹಿಂದೆ ಮುಗೀತು. ಅದಕ್ಕೆ ಬರಲಿಲ್ಲ.” ಎಂದು ಹೇಳಿ ಮಕ್ಕಳು, ಸೊಸೆಯಂದಿರು ಪೇಚಿಗೆ ಸಿಲುಕುವಂತೆ ಮಾಡಿದ್ದ. ಋಗ್ವೇದಿಯವರೇ, “ಇರಲಿ ಬಿಡು ಪಾಪು, ವರ್ತಮಾನದ ನಷ್ಟಗಳಿಗಿಂತ ಭವಿಷ್ಯದ ಲಾಭಗಳೇ ಮನುಷ್ಯನಿಗೆ ಇಂದು ಮುಖ್ಯವಾದದ್ದು. ದೆ ಹ್ಯಾವ್ ಡನ್ ಎ ಗುಡ್ ಜಾಬ್...” ಎಂದಿದ್ದರು. ಬಹುಶಃ ಅದೆಲ್ಲಾ ಗೊತ್ತಾಗಿ ಫೋಟೊದಲ್ಲಿರುವ ಹೆಂಡತಿ ನಕ್ಕಿರಬೇಕೆಂದು ಭಾವಿಸಿಕೊಂಡು ತಾವೂ ನಕ್ಕಿದ್ದರು.



ಪ್ರಿಯ ಓದುಗ ಮಹನೀಯರೇ, ಬದುಕಿನಲ್ಲಿ ಇಂಥ ಸನ್ನಿವೇಶಗಳನ್ನು ಎದುರಿಸುತ್ತಿರುವವರು ನಮ್ಮ ಪ್ರೊಫೆಸರ್ ಋಗ್ವೇದಿಯಂತೆ ಜಗತ್ತಿನಾದ್ಯಂತ ಲಕ್ಷಾಂತರ ಜನರಿದ್ದಾರೆ. ಅಂತಹವರಲ್ಲಿ ನೀವೂ ಒಬ್ಬರಿರಬಹುದು, ನಾನೂ ಕೂಡಾ ಒಬ್ಬನಾಗಿರಬಹುದು. ಹಾಗೆ ನೋಡಿದರೆ ಋಗ್ವೇದಿಯವರು ಅಂಥ ಸ್ಥಿತಿವಂತ ಕುಟುಂಬದಲ್ಲಿ ಹುಟ್ಟಿದವರೇನೂ ಅಲ್ಲ. ತಂದೆ ಕೊಬ್ಬರಿ ಮಂಡಿಯೊಂದರಲ್ಲಿ ಲೆಕ್ಕ ಬರೆಯುವ ಗುಮಾಸ್ತರಾಗಿದ್ದರು. ಹಾಗಾಗಿ ಪ್ರೈಮರಿ ಸ್ಕೂಲು ಮುಗಿಯುತ್ತಿದ್ದಂತೆ ಅವರ ತಾಯಿ ಬೇಡವೆಂದು ಬೇಡಿಕೊಂಡರೂ ಕೇಳದೆ ಋಗ್ವೇದಿಯನ್ನು ಮಠವೊಂದಕ್ಕೆ ಹಾಕಿಬಿಟ್ಟರು. ಮಠದಲ್ಲಿ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು, ತಣ್ಣೀರು ಸ್ನಾನ ಮಾಡಿ ಸಂಸ್ಕೃತ ಶ್ಲೋಕಗಳನ್ನು ಪಠಿಸಬೇಕಾಗಿತ್ತು. ಹೊಸತರಲ್ಲಿ ಋಗ್ವೇದಿಗೆ ಈ ಕೆಲಸಗಳು ಎಷ್ಟು ಹಿಂಸಾದಾಯಕವಾಗಿದ್ದವೆಂದರೆ ಮಠ ಸೇರಿದ ಒಂದೇ ವಾರದಲ್ಲಿ ಹೊಳೆಗೆ ಬಿದ್ದು ಸತ್ತುಹೋಗಿಬಿಡೋಣ ಎಂದು ಮೂರು ಸಾರಿ ಯೋಚನೆ ಮಾಡಿ, ಯಾಕೋ ತುಂಬಾ ಹೆದರಿಕೆಯಾಗಿ ಸುಮ್ಮನಾಗಿಬಿಟ್ಟಿದ್ದ. ಹತ್ತು ಹದಿನೈದು ದಿನಗಳ ನಂತರ ದೇಹ ಮತ್ತು ಮನಸ್ಸುಗಳು ಅತ್ಯಂತ ಸುಲಲಿತವಾಗಿ ಈ ಕೆಲಸಗಳಿಗೆ ಹೊಂದಿಕೊಂಡು ಬಿಟ್ಟಿದ್ದವು. ಮಠದಲ್ಲಿ ಓದುವುದರಿಂದ ಹಿಡಿದು ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಎಲ್ಲದರಲ್ಲೂ ಋಗ್ವೇದಿ ಮುಂದಿರುತ್ತಿದ್ದರಿಂದ ಹಿರಿಯ ಸ್ವಾಮಿಗಳ ಪ್ರೀತಿ, ವಿಶ್ವಾಸಗಳಿಗೆ ಪಾತ್ರನಾಗಿಬಿಟ್ಟ. ಹಾಗಾಗಿ ಅವನು ಎಷ್ಟರವರೆಗೆ ಓದಿದರೂ ಆ ಇಡೀ ವಿದ್ಯಾಭ್ಯಾಸದ ವೆಚ್ಚವನ್ನು ಮಠವೇ ಭರಿಸಲು ತೀರ್ಮಾನಿಸಿತು. ಋಗ್ವೇದಿ ಫೈನಲ್ ಇಯರ್ ಎಂ.ಎಸ್ಸಿಯಲ್ಲಿದ್ದಾಗ ತಾಯಿ ಶೀತರೋಗದಿಂದ ಸತ್ತ ನಂತರ ಅವರಪ್ಪ ಇನ್ಯಾರನ್ನೊ ಮದುವೆಯಾಗಿದ್ದ. ಆ ನಂತರ ಋಗ್ವೇದಿ ಮನೆಗೆ ಹೋಗಲಿಲ್ಲ. ಎಂ.ಎಸ್ಸಿ. ಕೆಮಿಸ್ಟ್ರಿಯಲ್ಲಿ ಗೋಲ್ಡ್ ಮೆಡಲ್ ಪಡೆದುಕೊಂಡ ಋಗ್ವೇದಿಗೆ ಮಠದ ಸ್ವಾಮಿಗಳ ಶಿಫಾರಸ್ಸಿನಿಂದಾಗಿ ಯೂನಿವರ್ಸಿಟಿಯಲ್ಲಿ ಅಧ್ಯಾಪಕ ಹುದ್ದೆ ದೊರಕಿತ್ತು. ಏಕವಚನದ ಋಗ್ವೇದಿ ಬಹುವಚನದ ಋಗ್ವೇದಿಯವರಾದರು. ಕೆಲಸಕ್ಕೆ ಸೇರಿದ ಎರಡೇ ತಿಂಗಳಲ್ಲಿ ಮಠದ ಸ್ವಾಮಿಗಳೂ ದೈವಾಧೀನರಾಗಿದ್ದರು. ಅಂದು ಮಠಕ್ಕೆ ಹೋಗಿ ಕಣ್ಣೀರು ಸುರಿಸಿ ಬಂದ ಋಗ್ವೇದಿಯವರು ಮತ್ತೆ